



# ಪಿಪಿಲಿಯಲ್ಲಿ ಚಾಂದುವಾ ಚಿಲಿಪಿಲಿ

ವಿಶ್ವವಿಖ್ಯಾತ ಪುರಿ ಜಗನ್ನಾಥ ರಥಯಾತ್ರೆಯ ದೃಶ್ಯಾವಳಿಗಳನ್ನು ನೀವು ನೋಡಿದ್ದರೆ ಅಲ್ಲಿ ಜಗನ್ನಾಥನಿಗೆ ಬಳಸಲಾಗುವ ರಂಗುರಂಗಿನ ಛತ್ರಿ–ಪತಾಕೆಗಳು ನಿಮ್ಮ ಗಮನಸೆಳೆಯದೇ ಇರುವುದಿಲ್ಲ. ಮನಮೋಹಕ ಕಸೂತಿ ಕಲೆಗಾರಿಕೆಯನ್ನು ಹೊಂದಿರುವ ಈ ಕಲಾಕೃತಿಗಳು ತಯಾರಾಗುವುದು ಒಡಿಶಾದ ಪುರಿ ಭುಬನೇಶ್ವರ್ ರಸ್ತೆಯಲ್ಲಿರುವ ಪಿಪಿಲಿ ಎಂಬ ಊರಿನಲ್ಲಿ.

ಪುರಿಯಿಂದ 36 ಕಿ.ಮೀ. ದೂರದಲ್ಲಿರುವ ಈ ಊರಿಗೆ ಶತಮಾನದಷ್ಟು ಹಳೆಯ ಇತಿಹಾಸವಿದೆ. 12ನೇ ಶತಮಾನದಲ್ಲಿ ಜಗನ್ನಾಥ ರಥಯಾತ್ರೆಗೆ ಕಸೂತಿಯ ಕಲಾಕೃತಿಗಳನ್ನು ತಯಾರಿಸಲು ಕರೆತಂದ ಕಲಾವಿದರಿಗೆ ಉಳಿಯಲು ಆಗಿನ ಕಳಿಂಗ ರಾಜರು ಈ ಪ್ರದೇಶವನ್ನು ನೀಡಿದರಂತೆ. ಅದು ಆಗಿನ ಕಥೆಯಾದರೆ, ಆ ಕಲಾವಿದರ ನಂತರದ ತಲೆಮಾರಿನವರು ಈ ಕಲೆಯನ್ನು ಮುಂದುವರೆಸಿ ಕಲೆಯಲ್ಲಿ ಹೊಸ ಹೊಸ ಆವಿಷ್ಕಾರಗಳನ್ನು ಹುಟ್ಟುಹಾಕಿ ಪಿಪಿಲಿಗೆ ಕಲಾಗ್ರಾಮವೆಂಬ ವಿಶೇಷಣವನ್ನು ದೊರಕಿಸಿಕೊಟ್ಟಿದ್ದಾರೆ.

ಕ್ಯಾನ್ವಸ್ ರೂಪದಲ್ಲಿ ಒಂದು ಮುಖ್ಯಹಾಸು ಬಟ್ಟೆಯನ್ನು ಬಳಸಿ, ಅದರ ಮೇಲೆ ವಿವಿಧ ಆಕರ್ಷಕ ಆಕಾರಗಳಲ್ಲಿ ಕತ್ತರಿಸಿದ ಬೇರೆ ಬೇರೆ ವರ್ಣಗಳ ಬಟ್ಟೆಗಳನ್ನು ಜೋಡಿಸಿ ಸೂಕ್ಷ್ಮವಾಗಿ ಹೊಲೆಯಲಾಗುವ, ‘ಚಾಂದುವಾ’ ಕಲೆಯೆಂದೇ ಕರೆಸಿಕೊಳ್ಳುವ ಈ ಕಸೂತಿಗಳು ತಯಾರಾಗುವುದು ಪಿಪಿಲಿ ಮತ್ತು ಅದರ ಆಸುಪಾಸಿನ ಗ್ರಾಮಗಳಲ್ಲಿ. ಮೂಲತಃ ದರ್ಜಿಗಳಾಗಿರುವ ಈ ಕಲಾವಿದರ ಮುನ್ನೂರಕ್ಕೂ ಹೆಚ್ಚು ಕುಟುಂಬಗಳು ಈ ಕಲೆಯಲ್ಲಿ ತೊಡಗಿಸಿಕೊಂಡಿವೆ.

ಪುರಿಯ ಸುಪ್ರಸಿದ್ದ ಜಗನ್ನಾಥ ಯಾತ್ರೆಗೆ ಬೇಕಾದ ಅಲಂಕಾರಿಕ ಸಾಮಗ್ರಿಗಳ ಜೊತೆಗೆ ಮನೆಗಳ ಗೋಡೆಗಳನ್ನು ಅಂದಗಾಣಿಸುವ ಪಟಗಳು, ಮಕ್ಕಳ ಛತ್ರಿಗಳು, ಬುಟ್ಟಿಗಳು, ಕೈಚೀಲ, ಹೆಗಲುಚೀಲಗಳು, ದಿಂಬುಹೊದಿಕೆ, ನೆಲಹಾಸು, ಶಾಮಿಯಾನ – ಹೀಗೆ ವಿವಿಧ ರೀತಿಯ ವಸ್ತುಗಳನ್ನು ಚಾಂದುವಾ ಕಲೆಯಲ್ಲಿ ಈ ಕಲಾವಿದರು ತಯಾರಿಸುತ್ತಾರೆ. ತಾಳೆಗರಿ ಮತ್ತು ಲೋಹದ ಹಾಳೆಗಳ ಮೇಲೆ ತಯಾರಾಗುವ ಉಬ್ಬು ಚಿತ್ರಗಳೂ ಈ ಕಲಾವಿದರ ಕೈಯಲ್ಲಿ ಮೂಡಿಬರುತ್ತವೆ.

ಕಣ್ಸೆಳೆಯುವಂತಹ ಹಸಿರು, ಹಳದಿ, ನೀಲಿ, ಕೆಂಪು ಬಣ್ಣಗಳ ಬಟ್ಟೆಗಳನ್ನೇ ಹೆಚ್ಚಾಗಿ ಬಳಸುವ ಈ ಕಸೂತಿಗಳ ಮುಖ್ಯ ವಿನ್ಯಾಸ ಈ ದರ್ಜಿ ಕುಟುಂಬಗಳ ಹೆಣ್ಣುಮಕ್ಕಳದು. ಪಿಪಿಲಿಯ ಮುಖ್ಯರಸ್ತೆಯಲ್ಲಿರುವ ಅಂಗಡಿಗಳು ಅಥವಾ ಪುರಿ ಮತ್ತು ಭುಬನೇಶ್ವರ್‌ನ ಮಾರಾಟಗಾರರ ಮೂಲಕ ಈ ಕುಸುರಿಗಳು ಗ್ರಾಹಕರನ್ನು ತಲುಪುತ್ತವೆ. ಓಡಿಶಾದ ಪುರಿ ಭುಬನೇಶ್ವರ ಹೆದ್ದಾರಿಯಲ್ಲಿ ಓಡಾಡುವ ಪ್ರವಾಸಿಗರಿಗೆ ಪಿಪಿಲಿಯೊಂದು ಕಾಯಂ ನಿಲ್ದಾಣ.

ಮುಖ್ಯರಸ್ತೆಯ ಇಬ್ಬದಿಯಲ್ಲೂ ವರ್ಣರಂಜಿತ ಕುಸುರಿ ಕಲಾಕೃತಿಗಳನ್ನು ಪ್ರದರ್ಶನಕ್ಕಿಟ್ಟು ಗ್ರಾಹಕರನ್ನು ಸೆಳೆಯುವ ಅಂಗಡಿಗಳನ್ನು ಕಂಡೊಡನೆ ಇದು ಪಿಪಿಲಿಯೆಂದು ಅರಿವಾಗುತ್ತದೆ. ಒಮ್ಮೆ ಈ ಅಂಗಡಿಗಳ ಒಳಗೆ ಹೊಕ್ಕಿರೆಂದರೆ ಚಾಂದುವಾ ವೈವಿಧ್ಯದ ಅರಿವು ನೋಡುಗರದಾಗುತ್ತದೆ. ತನ್ನ ಸೂಕ್ಷ್ಮಕುಸುರಿಯಿಂದ ಈ ಪ್ರವಾಸಿಗರ ಗಮನ ಸೆಳೆದು ಅವರಿಂದ ದೇಶದ ಎಲ್ಲೆಡೆ ಓಡಾಡುವ ಈ ಕಲಾಕೃತಿಗಳು ಕಲಾವಿದರ ಹೊಟ್ಟೆಗೆ ಇಂಧನವೂ ಹೌದು.

■ ಸುನೀಲ್ ಬಾರ್ಕೂರ್